## ಪಕ್ಷಿಗಳು ಹಾಗೂ ಬಾವಲಿಗಳ ಮಧ್ಯೆ ಇರುವ ವ್ಯತ್ಯಾಸವೇನು?




ಒಂದು ಲಾಭೋದ್ದೇಶವಿಲ್ಲದ ಸಂಸ್ಥೆಯ ಮಕ್ಕಳಿಗೆ ಹಾಗೂ ವಯಸ್ಕರಿಗೆ ಪ್ರಕೃತಿಯ ಪರಿಚಯ ಮಾಡಿಸುವ ಯೋಜನೆಯ ಅಂಗವಾಗಿ ಇದನ್ನು ತಯಾರಿಸಲಾಗಿದೆ.

www.ncf-india/org/education-and-public-engament/a-nature-learning-framework-for-schools

nature conservation foundation

February 2020

# ಬಾವಲಿಗಳು: ಹಾರುವ ಸ್ತನಿಗಳು



©Aniruddha Singhamahapatra

## ನಿಮ್ಮ ಬಾವಲಿಗಳ ಬಗ್ಗೆ ತಿಳಿಯಿರಿ

- ನಾಯಿಗಳು, ಬೆಕ್ಕುಗಳು, ಕುರಿಗಳು, ಹಸುಗಳು ಹಾಗೂ ನಮ್ಮ ಹಾಗೆ ಬಾವಲಿಗಳು ಕೂಡ ಸಸ್ತನಿಗಳು!
- ಬಾವಲಿಗಳು ಜೀವಂತ ಮರಿಗಳಿಗೆ ಜನ್ಮ ನೀಡುತ್ತವೆ.
- ಹಾರ ಬಲ್ಲ ಏಕೈಕ ಸಸ್ತನಿಗಳು ಇವಾಗಿವೆ.
- ಬಾವಲಿಗಳ ರೆಕ್ಕೆಗಳು ಅವುಗಳ ಬೆರಳಿನ ಮೂಳೆಗಳ ನಡುವೆ ತುಂಬಾ ತೆಳುವಾಗಿ ಹಿಗ್ಗಿಕೊಂಡ ಚರ್ಮದಿಂದ ಮಾಡಲ್ಪಟ್ಟಿದೆ.
- ಭಾರತದಲ್ಲಿನ ಅತಿ ದೊಡ್ಡ ಬಾವಲಿಗಳನ್ನು ಭಾರತೀಯ ಹಾರುವ ನರಿ ಎಂದು ಕರೆಯಲಾಗುತ್ತದೆ.

# ಬಾವಲಿಗಳ ನಡವಳಿಕೆ



Photograph by Manojiritty

ಬಾವಲಿಗಳು ಕೀಟಗಳನ್ನು ಹಾಗೂ ಹಣ್ಣುಗಳನ್ನು ತಿನ್ನುತ್ತವೆ ಜೊತೆಗೆ ಮಕರಂದವನ್ನು ಕೂಡ ಕುಡಿಯುತ್ತವೆ.

ಕೆಲವೊಮ್ಮೆ, ಅವು ಹಣ್ಣಿನ ಬೀಜಗಳನ್ನು ಬೇರೆ ಬೇರೆ ಕಡೆಗಳಲ್ಲಿ ಉದುರಿಸುತ್ತವೆ.

ಕೆಲವೊಂದು ಹಲ್ಲಿಗಳು, ಕಪ್ಪೆಗಳು ಹಾಗೂ ಮೀನುಗಳನ್ನು ಕೂಡ ಹಿಡಿಯುತ್ತವೆ.



Photograph by Ronit Dhanphole



Photograph by Abijith K.A

ಬಾವಲಿಗಳು ನಿಶಾಚಾರಿ ಜೀವಿಗಳು; ಇದರರ್ಥ ಅವು ರಾತ್ರಿಯ ಸಮಯದಲ್ಲಿ ಸಂಚರಿಸುತ್ತವೆ.

ಬಾವಲಿಗಳು ಸಾಮಾನ್ಯವಾಗಿ ಗುಹೆಗಳಲ್ಲಿ, ಮರಗಳ ಮೇಲೆ, ಕಲ್ಲುಗಳ ಹಿಂದೆ ಹಾಗೂ ಹಳೆಯ, ಪಾಳು ಬಿದ್ದ ಕಟ್ಟಡಗಳಲ್ಲಿ ದಣಿವಾರಿಸಿಕೊಳ್ಳುತ್ತವೆ ಅಥವಾ ಮಲಗುತ್ತವೆ.

# ನಮ್ಮ ಸುತ್ತಲಿನ ಬಾವಲಿಗಳು

ನೀವು ಬಾವಲಿಗಳನ್ನು ಎಲ್ಲಿ ನೋಡಿದ್ದೀರಾ?
ಅವುಗಳನ್ನು ವಿವರಿಸಬಲ್ಲಿರೇ- ಅವುಗಳ ಗಾತ್ರ, ಬಣ್ಣ, ನಡುವಳಿಕೆಗಳ ಬಗ್ಗೆ

ನೀವು ಬಾವಲಿಗಳು ತಲೆ ಕೆಳಗಾಗಿ ಕರೆಂಟ್ ತಂತಿಗಳಲ್ಲಿ ನೇತಾಡುತ್ತ ಇರುವುದನ್ನು ಪೇಟೆ-ಪಟ್ಟಣಗಳಲ್ಲಿ ನೋಡಿರಬಹುದು.

ಸುಮಾರು ಬಾವಲಿಗಳು ಅವುಗಳ ರೆಕ್ಕೆಯು ತಂತಿಗಳನ್ನು ತಾಗಿ ವಿದ್ಯುತ್ ಆಘಾತದಿಂದ ಬಳಲಿ ಸಾಯುತ್ತವೆ.



Photograph by Dr. Raju Kasambe

ನಿಮ್ಮ ಮನೆಯ ಒಳಗೆ ಒಂದು ಬಾವಲಿ ಕಂಡು ಬಂದಲ್ಲಿ ನೀವೇನು ಮಾಡುತ್ತೀರಿ?

# ಬಾವಲಿಗಳ ಸತ್ಯಾಂಶ

ಬಾವಲಿಗಳ ಕಿವಿ ಬಹಳ ಚುರುಕಾಗಿದೆ.

ಅವು ತಮಗೆ ವಾಪಾಸ್ ಕೇಳಿ ಬರುವಂತಹ ಕೆಲವು ಶಬ್ದಗಳನ್ನು ಮಾಡುತ್ತವೆ.

ಇದರಿಂದ ಅವು ಯಾವುದು ಎಲ್ಲಿದೆ ಎಂದು ತಿಳಿಯಲು ಸಹಾಯ ಆಗುತ್ತದೆ. ಅಷ್ಟೆ ಅಲ್ಲ ಅವುಗಳ ಆಹಾರವನ್ನು ಹಿಡಿಯಲು ಕೂಡ ಸಹಾಯ ಮಾಡುತ್ತದೆ. ನಮ್ಮ ಕಿವಿಗೆ ಈ ಬಾವಲಿಗಳು ಮಾಡುವ ಶಬ್ದ ಕೇಳಿ ಬರುವುದಿಲ್ಲ.

ಇವು ಎತ್ತರದ ಸ್ವರದ ಶಬ್ದವಾಗಿದ್ದು ನಮ್ಮ ಶ್ರವಣ ಶ್ರೇಣಿಗಿಂತ ಹೊರಗಿದೆ.

**ನೀವು ಎಷ್ಟು ತರಹದ ಎತ್ತರದ ಸ್ವರದ ಶಬ್ದಗಳನ್ನು ಹಾಗೂ ಧ್ವನಿಯನ್ನು ಮಾಡಬಲ್ಲಿರಿ?**

